ಇಂದು ದಿ: **04.04.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ವಾದಿಗಳ ಪರ:ಶ್ರೀ ಜೆ ಯು ಎಸ್.,ವಕೀಲರಿಂದ.

ಈ ದಾವೆಯನ್ನು ಸಿದ್ದಪ್ಪನ ಮೇಲೆ ಸಲ್ಲಿಸಿರುತ್ತಾರೆ. ಆದರೆ ಯಾರು ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಏನು ಬರೆಸಿರುತ್ತದೆ ಎಂದು ಗೊತ್ತಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಮೂಲ ಪುರುಷ ರಾಮಪ್ಪ ಎನ್ನುವುದು ನಿಜ. ಸದರಿ ರಾಮಪ್ಪನಿಗೆ 3 ಜನ ಮಕ್ಕಳು ಎನ್ನುವುದು ನಿಜ. ಅವರು ವಾದಿಯರ ತಂದೆ ಬಸಪ್ಪ, ಸಿದ್ದಪ್ಪ ಮತ್ತು ದ್ಯಾಮಪ್ಪ ಎನ್ನುವುದು ನಿಜ. ಅವರ ಕುಟುಂಬದ ಏನು ವ್ಯವಹಾರ ಅಗಿದೆ ಎಂದು ಗೊತ್ತಿರುವುದಿಲ್ಲ. ಪ್ರಕಾಶ್ ಇವರ ಅಫೀಸಿನಲ್ಲಿ ಮೃತ್ಯು ಪತ್ರವನ್ನು ಬರೆದಿರುತ್ತದೆ. ಸದರಿ ಮೃತ್ಯು ಪತ್ರವನ್ನು ತಿಮ್ಮವ್ವ ಹೇಳಿ ಬರೆಸಿರುತ್ತಾಳೆ. ಸದರಿ ತಿಮ್ಮವ್ವನಿಗೆ 80 ವರ್ಷ ವಯಸ್ಸು ಇದ್ದು, ಅವಳಿಗೆ ಸರಿಯಾಗಿ ಕಣ್ಣು ಕಾಣಿಸುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರದ ಸ್ಟಾಂಪ್ ಪೇಪರನ್ನು ತಿಮ್ಮವ್ವ ತಂದಿರುತ್ತಾಳೆ. ಸದರಿ ಮೃತ್ಯುಪತ್ರಕ್ಕೆ ತಿಮ್ಮವ್ವ ಸಹಿಯನ್ನು ಮಾಡಿರುತ್ತಾಳೆ. ನಾನು ಸದರಿ ಪತ್ರಕ್ಕೆ ಸಹಿಯನ್ನು ಮಾಡಿರುತ್ತೇನೆ. ಸದರಿ ಪತ್ರಕ್ಕೆ ಸಹಿ ಮಾಡಿದಾಗ ಮಧ್ಯಾಹ್ನ 1-00 ಗಂಟೆ ಆಗಿತ್ತು. ಸದರಿ ಪತ್ರಕ್ಕೆ ಸಹಿ ಮಾಡುವಾಗ ತಿಮ್ಮವ್ವ, ಸಿದ್ದಪ್ಪ, ಪ್ರಕಾಶ, ರಾಮಣ್ಣ ಮತ್ತು ನಾನು ಇದ್ದೇವು. ರಾಮಪ್ಪ ಮತ್ತು ಸಿದ್ದಪ್ಪ ಎಂದರೆ ಈ ದಾವೆಯ 1 ಮತ್ತು 2 ನೇ ಪ್ರತಿವಾದಿಗಳು ಎನ್ನುವುದು ನಿಜ. ನನಗೆ ಏನು ಮಾಹಿತಿ ಗೊತ್ತಿಲ್ಲದೆ ಇದ್ದರು ಸಹ ವಾದಿಗಳಿಗೆ ತೊಂದರೆ ಕೊಟ್ಟು ಪ್ರತಿವಾದಿಗೆ ಅನುಕೂಲ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರವನ್ನು ನಾವು ಸೃಷ್ಟಿ ಮಾಡಿದ್ದು, ಅದಕ್ಕೆ ತಿಮ್ಮವ್ವ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿಯರಿಗೆ ತೊಂದರೆ ಕೊಡುವ ಸಲುವಾಗಿ ಪ್ರತಿವಾದಿಗಳ ಮಾತನ್ನು ಕೇಳಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.